# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | 1431 |
| ಮಾನ್ಯ ಸದಸ್ಯರ ಹೆಸರು | ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 18.12.2025 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಿಎಲ್-5 ಸಾಂದರ್ಭಿಕ ಸನ್ನದು ಪಡೆದು ಮದುವೆ ಮತ್ತು ಇನ್ನಿತರೆ ಕುಟುಂಬದ ಕಾರ್ಯಕ್ರಮಗಳಲ್ಲಿ ಇಲಾಖೆಯ ಅಧಿಕಾರಿಗಳು ಮನೆಗಳಿಗೆ ನುಗ್ಗಿ ಸಮಾರಂಭವನ್ನು ಗೊಂದಲಮಯವನ್ನಾಗಿ ಮಾಡಿದ ಬಗ್ಗೆ ಕರಾವಳಿ ಭಾಗದಲ್ಲಿ ಬಂದ ದೂರುಗಳೆಷ್ಟು: ಈ ಬಗ್ಗೆ ಇಲಾಖೆ ಕೈಗೊಂಡ ಕ್ರಮವೇನು: (ವಿವರ ನೀಡುವುದು) | ಸಿಎಲ್-5 ಸಾಂದರ್ಭಿಕ ಸನ್ನದು ಪಡೆದ ಸನ್ನದು ಆವರಣಗಳಿಗೆ ಜಾರಿ ಮತ್ತು ತಪಾಸಣೆಗಾಗಿ ಅಬಕಾರಿ ಅಧಿಕಾರಿ ಭೇಟಿ ನೀಡುತ್ತಾರೆ.<br><br>ಇಂತಹ ಸಮಯದಲ್ಲಿ ಇಲಾಖೆಯ ಅಧಿಕಾರಿಗಳು ಮನೆಗಳಿಗೆ ನುಗ್ಗಿ ಸಮಾರಂಭಗಳನ್ನು ಗೊಂದಲಮಯವನ್ನಾಗಿ ಮಾಡಿರುವ ಬಗ್ಗೆ ಕರಾವಳಿ ಭಾಗದಿಂದ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. |
| ಆ) | ಮದುವೆ, ಬರ್ತಡೆ ಇನ್ನಿತರ ಸಮಾರಂಭಗಳಿಗಾಗಿ ಪ್ರಸ್ತುತ ಇರುವ ರೂ.11,500/- ಯಿಂದ ವಿನಾಯಿತಿ ನೀಡಿ, ಕನಿಷ್ಟ ರೂ.2000/- ಕ್ಕೆ ಇಳಿಸಬೇಕೆಂಬ ಸಾರ್ವಜನಿಕರ ಬೇಡಿಕೆ ಇದ್ದು, ಇದನ್ನು ಸರ್ಕಾರ ಪರಿಗಣಿಸುವುದೆ: | ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 3(5) ರನ್ವಯ ಸಾರ್ವಜನಿಕ ಮನೋರಂಜನೆ ಕಾರ್ಯಕ್ರಮಗಳು, ಕೌಟುಂಬಿಕ ಕಾರ್ಯಕ್ರಮಗಳು ಹಾಗೂ ಇನ್ನಿತರೆ ಸಾರ್ವಜನಿಕ ಸಮಾರಂಭಗಳಿಗೆ ಸಿಎಲ್-5 (ಸಾಂದರ್ಭಿಕ) ಸನ್ನದನ್ನು ಸಾರ್ವಜನಿಕರು ಪಡೆಯಲು ಅವಕಾಶ ಇರುತ್ತದೆ.<br><br>ಪ್ರಸ್ತುತ ಸಿಎಲ್-5 ಸನ್ನದುಗಳನ್ನು ಪಡೆಯಲು ಪ್ರತಿ ದಿನಕ್ಕೆ ಸನ್ನದು ಶುಲ್ಕ ರೂ. 10,000/- ಗಳು ಮತ್ತು ಹೆಚ್ಚುವರಿ ಸನ್ನದು ಶುಲ್ಕ ರೂ. 1,500/- ಗಳನ್ನು ಸರ್ಕಾರಕ್ಕೆ ಪಾವತಿಸಬೇಕಾಗಿರುತ್ತದೆ. |

| | | |
|---|---|---|
| | | ಸಿಎಲ್-5 ಸನ್ನದು ಮಂಜೂರು ಮಾಡಲಾಗುತ್ತಿರುವ ಸಾರ್ವಜನಿಕ ಸಮಾರಂಭಗಳು, ಸಭೆಗಳು ಹಾಗೂ ಮನೋರಂಜನಾ ಕಾರ್ಯಕ್ರಮಗಳನ್ನು ವಾಣಿಜ್ಯ ಕಾರ್ಯಕ್ರಮ ಹಾಗೂ ವಾಣಿಜ್ಯೇತರ ಕಾರ್ಯಕ್ರಮಗಳು ಎಂದು ವಿಂಗಡಿಸಿ ಕಾರ್ಯಕ್ರಮದ ಅನುಸಾರ ಸನ್ನದು ಶುಲ್ಕ ವಿಧಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |
| ಇ) | ಸಾಂದರ್ಭಿಕ ಪರವಾನಿಗೆ ಸಮಾರಂಭ ನಡೆಯುವ ಸಾರ್ವಜನಿಕ ಹಾಲ್‌ಗಳಿಗೆ ನೀಡುವುದು ಮತ್ತು ಏಕ ಗವಾಕ್ಷಿ (ಸಿಂಗಲ್ ವಿಂಡೋ) ರೀತಿಯಲ್ಲಿ ಮಾಡಿದರೆ ಜನರಿಗೆ ಕಛೇರಿಗೆ ಅಲೆದಾಡುವುದು ತಪ್ಪುವುದರಿಂದ ಸದರಿ ಬೇಡಿಕೆಯನ್ನು ಪರಿಗಣಿಸಲಾಗುವುದೇ; | ಸಿಎಲ್-5 ಸನ್ನದು ಪಡೆಯುವ ಪ್ರಕ್ರಿಯೆಯನ್ನು ಇನ್ನಷ್ಟು ಸರಳೀಕರಣಗೊಳಿಸುವ ಉದ್ದೇಶದಿಂದ ಹಂತಗಳನ್ನು ಕಡಿತಗೊಳಿಸಿ ಅರ್ಜಿದಾರರು ಸಿಎಲ್-5 ಸನ್ನದು ಕೋರಿ ಅರ್ಜಿ ಸಲ್ಲಿಸಿದ್ದಲ್ಲಿ, ನೇರವಾಗಿ ಸನ್ನದು ಮಂಜೂರಾತಿ ಪ್ರಾಧಿಕಾರಿಯಾದ ಅಬಕಾರಿ ಉಪ ಆಯುಕ್ತರ ಲಾಗಿನ್‌ಗೆ ತಲುಪುವಂತೆ ಹಾಗೂ ಅಬಕಾರಿ ಉಪ ಆಯುಕ್ತರು ಪರಿಶೀಲಿಸಿ ಕೂಡಲೇ ಸಿಎಲ್-5 ಸನ್ನದು ಮಂಜೂರು ಮಾಡುವಂತೆ ಕ್ರಮವಹಿಸಲಾಗಿರುತ್ತದೆ. |
| ಈ) | ಮದುವೆ ಸಮಾರಂಭಗಳಿಗೆ ಮದ್ಯ ವಿತರಿಸುವುದು ಮಾರಾಟದಲ್ಲಿನ ಕಾರಣಕ್ಕಾಗಿ ಕಾನೂನಿನಲ್ಲಿ ತಿದ್ದುಪಡಿ ತಂದು, ಸರಳೀಕರಣ ಮಾಡುವುದು ಸೂಕ್ತವೆಂಬ ಅಭಿಪ್ರಾಯವಿದ್ದು, ಈ ಬಗ್ಗೆ ಇಲಾಖೆ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು) | ವಾಣಿಜ್ಯ ಕಾರ್ಯಕ್ರಮ ಹಾಗೂ ವಾಣಿಜ್ಯೇತರ ಕಾರ್ಯಕ್ರಮಗಳು ಎಂದು ವಿಂಗಡಿಸಿ ಕಾರ್ಯಕ್ರಮದ ಅನುಸಾರ ಸನ್ನದು ಶುಲ್ಕ ವಿಧಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |

**ಆಇ 104 ಇಎಲ್‌ಕ್ಯೂ 2025**

(ಆರ್.ಬಿ.ತಿಮ್ಮಾಪುರ)

**ಅಬಕಾರಿ ಸಚಿವರು**